ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪಡಿತರ ವ್ಯವಸ್ಥೆಯಲ್ಲಿ ಹಂಚಿಕೆ ಆಗುವ ಧಾನ್ಯಗಳು

೨೮೬. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪಡಿತರ ವ್ಯವಸ್ಥೆಯಲ್ಲಿ ಹಂಚಿಕೆ ಮಾಡುತ್ತಿರುವ ಆಹಾರ ಧಾನ್ಯಗಳು ಯಾವುವು ?

ಆ) ಪಡಿತರ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ನೀಡುತ್ತಿರುವ ಆಹಾರ ಪ್ರಮಾಣವೆಷ್ಟು ?

ಇ) ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶಗಳ ಪಡಿತರ ವ್ಯವಸ್ಥೆಯಲ್ಲಿ ಅಸಮಾನತೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದೆ ?

ಈ) ಅನೌಪಚಾರಿಕ ಪಡಿತರ ವ್ಯವಸ್ಥೆ ಚಾಲ್ತಿಯಲ್ಲಿರುವ ನಗರಗಳ ಸಂಖ್ಯೆ ಎಷ್ಟು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಅಕ್ಕಿ, ಗೋಧಿ, ಸಕ್ಕರೆ, ತಾಳಿಎಣ್ಣೆ, ಮತ್ತು ಸೀಮೆಎಣ್ಣೆ

ಆ) ಅನುಬಂಧದಲ್ಲಿ ವಿವರಿಸಿದೆ

ಇ) ಪಟ್ಟಣ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯದಿರುವುದರಿಂದ, ಹಾಗೂ ಮಹಾನಗರಗಳಲ್ಲಿ ಮುಕ್ತ ಮಾರುಕಟ್ಟೆಯ ಧಾರಣೆಯು ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚಾಗಿರುವುದರಿಂದ ಮತ್ತು ಗ್ರಾಹಕರ ಕೇಂದ್ರೀಕರಣವು ಗ್ರಾಮಾಂತರ ಪ್ರದೇಶಗಳಿಗಿಂತ ಜಾಸ್ತಿ ಇರುವುದರಿಂದ ಮೊದಲಿನಿಂದಲೂ ಪಟ್ಟಣಪ್ರದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಪಡಿತರ ವ್ಯವಸ್ಥೆಯಲ್ಲಿ ನೀಡುತ್ತಿರುವುದನ್ನು ಮುಂದುವರೆಸಿಕೊಂಡು ಬಂದಿದೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ದಾಸ್ತಾನು ಬಿಡುಗಡೆ ಮಾಡಿದಾಗ ಗ್ರಾಮಾಂತರ ಪ್ರದೇಶಗಳಿಗೂ ಹೆಚ್ಚಿನ ಪ್ರಮಾಣದ ಪಡಿತರ ವಿತರಣೆ ಮಾಡಲಾಗುತ್ತಿದೆ.

ಈ) ನಲವತ್ತೈದು

ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಆಹಾರ ಧಾನ್ಯಗಳ ವಿತರಣೆಯ ವಿನ್ಯಾಸ (ಕೇಂದ್ರ ಸರ್ಕಾರದಿಂದ ಮಾಹೆಯಾನ ಬಿಡುಗಡೆ ಹೊಂದುವ ದಾಸ್ತಾನಿನ ಏರಿಳಿತಕ್ಕೆ ತಕ್ಕಂತೆ)

ಪಡಿತರ ಚೀಟಿಗಳು	ಅಕ್ಕಿ	ಗೋಧಿ	ಸಕ್ಕರೆ
ಹಸಿರು	೫ ರಿಂದ ೬ ಕೆಜಿ	೫ ರಿಂದ ೪ ಕೆಜಿ	೧.೭೫ ಕೆ.ಜಿ.
ಕೇಸರಿ	೫ ಕೆಜಿ	೬ ರಿಂದ ೧೦ ಕೆಜಿ	೧.೭೫ಕೆ.ಜಿ.
ಪಟ್ಟಣ ಪ್ರದೇಶ	೮ ರಿಂದ ೧೦ ಕೆಜಿ	೬ ರಿಂದ ೧೦ ಕೆಜಿ	೩ ಕೆ.ಜಿ.
ಅನೌಪಚಾರಿಕ ಪಡಿತರ ಪ್ರದೇಶ	೧ ಕೆಜಿ ಯೂನಿಟ್‌ಗೆ ಅಥವಾ ೨ ಕೆಜಿ ಒಬ್ಬ ವಯಸ್ಕರಿಗೆ ೪ ಕೆಜಿ ಗರಿಷ್ಠ ಟಿ. ಡಿ. ಪಿ. ಪ್ರದೇಶ	೬ ರಿಂದ ೮೦ ಕೆಜಿ	೫೦೦ ಗ್ರಾಂ ಯೂನಿಟ್ಟಿಗೆ ೫ ಕೆಜಿ ಮೀರದಂತೆ
ಹಸಿರು	೧೦ ಕೆಜಿ	೩ ಕೆಜಿ	೧.೭೫ ಕೆ.ಜಿ.
ಕೇಸರಿ	೫ ಕೆಜಿ	೬ ರಿಂದ ೧೦ ಕೆಜಿ	೧.೭೫ ಕೆ.ಜಿ.